**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿ.ಸಂಖ್ಯೆಃ 743/2018**

**ಪಿರ್ಯಾದಿ** ಃ ಕವಲಂದೆ ಪೊಲೀಸರು

**ವಿರುದ್ಧ**

**ಆರೋಪಿತರು ಃ**

1. ಸಾವಿತ್ರಮ್ಮ ಕೋಂ ಶಿವಣ್ಣ, 35 ವರ್ಷ,
2. ಸಿದ್ಧಮ್ಮ, ಕೋಂ ಲೇ. ಮಲ್ಲೇಗೌಡ, 50 ವರ್ಷ
   ಇಬ್ಬರ ವಾಸಃ ಚಿನ್ನದಗುಡಿಹುಂಡಿ ಗ್ರಾಮ, ನಂಜನಗೂಡು ತಾ.
3. ಚಂದ್ರಮ್ಮ, ಕೋಂ ಚಿಕ್ಕಣ್ಣ, 40 ವರ್ಷ
   ವಾಸಃ ಬೆಂದಗಹಳ್ಳಿ ಗ್ರಾಮ, ನಂಜನಗೂಡು ತಾ.

**ದೋಷಾರೋಪಣೆ**

*ಶ್ರೀ ಕಿಶೋರ್ ಕುಮಾರ್ ಎಂ., 1ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ 27.10.2017 ರಂದು ಬೆಳಗ್ಗೆ 07.30 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಿನ್ನದಗುಡಿಹುಂಡಿ ಗ್ರಾಮದ ಚಾಸಾ-1 ರವರ ಮನೆಯ ಮುಂಭಾಗದ ರಸ್ತೆಯಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ ಚಾಸಾ-1 ರವರಿಗೆ ನೀವು ಪೊಲೀಸ್ ಠಾಣೆಗೆ ದೂರು ಕೊಟ್ಟು ಏನು ಮಾಡಿಕೊಂಡಿದ್ದೀರಿ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಆ ಪೈಕಿ 2 ನೇ ಆರೋಪಿತರಾದ ನೀವು ಚಾಸಾ-1 ರವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ತಬ್ಬಿ ಹಿಡಿದುಕೊಂಡು ಅಕ್ರಮ ತಡೆಯನ್ನುಂಟುಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 341 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಆ ಪೈಕಿ 1 ನೇ ಆರೋಪಿತರಾದ ನೀವು

ದೊಣ್ಣೆಯಿಂದ ಚಾಸಾ-1 ರವರ ತಲೆಗೆ ಮತ್ತು ಎರಡು ಕೈಗಳಿಗೆ ಸ್ವಯಂ ಪ್ರೇರಿತವಾಗಿ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟುಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಆ ಪೈಕಿ 3 ನೇ ಆರೋಪಿಯು ಈ ಮಕ್ಕಳಿಗೆ ಎಷ್ಟು ಖರ್ಚಾದರೂ ಸರಿ ಎಂದು ಇತರೆ ಆರೋಪಿತರಿಗೆ ಕುಮ್ಮಕ್ಕು ನೀಡಿ ದುಷ್ಪ್ರೇರಣೆ ಮಾಡಿರುತ್ತಾರೆ. ಆದ್ದರಿಂದ 3 ನೇ ಆರೋಪಿಯು ಭಾರತ ದಂಡ ಸಂಹಿತೆಯ ಕಲಂ 114 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಸಮಾನ ಉದ್ದೇಶ ಹೊಂದಿ, ಚಾಸಾ-1 ರವರಿಗೆ ಕೊಲೆ ಬೆದರಿಕೆ ಹಾಕಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 06.03.2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**<u>ಸಿ.ಸಿ.ಸಂಖ್ಯೆಃ 743/2018</u>**

**ಪಿರ್ಯಾದಿ** ಃ ಕವಲಂದೆ ಪೊಲೀಸರು

**ವಿರುದ್ಧ**

**ಆರೋಪಿತರು ಃ**
1. ಸಾವಿತ್ರಮ್ಮ ಕೋಂ ಶಿವಣ್ಣ, 35 ವರ್ಷ,
2. ಸಿದ್ಧಮ್ಮ, ಕೋಂ ಲೇ. ಮಲ್ಲೇಗೌಡ, 50 ವರ್ಷ
   ಇಬ್ಬರ ವಾಸಃ ಚಿನ್ನದಗುಡಿಹುಂಡಿ ಗ್ರಾಮ, ನಂಜನಗೂಡು ತಾ.
3. ಚಂದ್ರಮ್ಮ, ಕೋಂ ಚಿಕ್ಕಣ್ಣ, 40 ವರ್ಷ
   ವಾಸಃ ಬೆಂದಗಹಳ್ಳಿ ಗ್ರಾಮ, ನಂಜನಗೂಡು ತಾ.

ಃ ಆಪಾದನೆ ಃ

ಪ್ರಶ್ನೆ1 ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ ಃ

ಪ್ರಶ್ನೆ2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

**ದಿನಾಂಕಃ**

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು